ಅಧ್ಯಕ್ಷರು : ಕಳುಹಿಸಿ ಕೊಡುತ್ತೇನೆಂದು ಅವರು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರ ಪರವಾಗಿ ಉತ್ತರವನ್ನು ಕೊಡುತ್ತಿದ್ದಾರೆ, ಅವರ ಹತ್ತಿರ ಮಾಹಿತಿ ಇಲ್ಲ.

(ಗೊಂದಲ)

ಶ್ರೀ ವೈಜನಾಥ್ ಪಾಟೀಲ್ : ಈ ಅಸೆಂಬ್ಲಿ ಏಕೆ ಬೇಕು. ಈ ಅಧಿವೇಶನ ಏಕೆ ಬೇಕು. ಮಾನ್ಯ ಯಡಿಯೂರಪ್ಪನವರು ಬರಬೇಕಾಗಿಲ್ಲ, ಇದರಲ್ಲಿಯೆ ಉತ್ತರವನ್ನು ಕೊಡಬಹುದಾಗಿತ್ತು.

ಅಧ್ಯಕ್ಷರು : ಅವರ ಹತ್ತಿರ ಮಾಹಿತಿ ಇಲ್ಲ. ಸಂಬಂಧಪಟ್ಟ ಸಚಿವರು ಇಲ್ಲ.

ಶ್ರೀ ವೈಜನಾಥ್ ಪಾಟೀಲ್ : ಸರ್ಕಾರ ಇಲ್ಲವೆ ? ಮಾಹಿತಿ ಇಲ್ಲವೆಂದರೆ ನಾಳೆ ಕೊಡುತ್ತೀರಾ? ಮತ್ತೆ ಯಾವಾಗ ಕೊಡುತ್ತೀರಿ, ಇದನ್ನು ಹೌಸ್ ನಲ್ಲಿ ಕೊಡಬೇಕು. ಇದು ಚರ್ಚಿಸುವ ವಿಷಯ ಇದೆ. ಇದು ಸದನದಲ್ಲಿ ಉತ್ತರಿಸುವ ಪ್ರಶ್ನೆ ಇದೆ. ಇದು private ನಲ್ಲಿ ಮಾಡುವುದು ಅಲ್ಲ.

ಅಧ್ಯಕ್ಷರು : ಆಯಿತು, ಬಿ.ಕೆ. ಸಂಗಮೇಶ್ವರವರು, ಇಲ್ಲವೆ ?

ಏತ ನೀರಾವರಿ ಸೌಲಭ್ಯ

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೩೮ (೧೪೬೮)

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಿ)

ಉತ್ತರಿಸುವವರು :

ಪ್ರಶ್ನೆ

ಅ) ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಸದಲಗಾ ಮತ ಕ್ಷೇತ್ರ ವ್ಯಾಪ್ತಿಯ ಮಲ್ಲಿಕವಾಡ ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಏತ ನೀರಾವರಿ ಯೋಜನೆ ಸಂಪೂರ್ಣಗೊಂಡಿದೆಯೇ;

ಆ) ಸಂಪೂರ್ಣಗೊಂಡಿದ್ದರೆ ಈ ಸೌಲಭ್ಯದಿಂದ ರೈತ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ (ಸಂಪೂರ್ಣ ವಿವರ ನೀಡುವುದು) ;

ಇ) ರೈತರು ನೀರಾವರಿ ಸೌಲಭ್ಯವನ್ನು ಇನ್ನೂ ಪಡೆಯದಿದ್ದರೆ ಅದಕ್ಕೆ ಕಾರಣಗಳೇನು ?

ಉತ್ತರ

ಅ) ಹೌದು

ಆ) ಈ ಯೋಜನೆಯ ಅಚ್ಚುಕಟ್ಟು ೩೦೧ ಎಕರೆ. ಯೋಜನೆಯಡಿಯಲ್ಲಿಯ ಅಚ್ಚುಕಟ್ಟು ಪ್ರದೇಶದ ರೈತರಿಂದ ನೀರಿಗೆ ಯಾವುದೇ ಬೇಡಿಕೆ ಬಾರದೆ ಇದ್ದುದರಿಂದ. ಉದ್ದೇಶಿತ ಅಚ್ಚುಕಟ್ಟಿಗೆ ನೀರೊದಗಿಸಲು ಸಾಧ್ಯವಾಗಲಿಲ್ಲ. ಆದರೆ, ಈ ಏತ ನೀರಾವರಿ ಯೋಜನೆಯಿಂದ ಯಾದನವಾಡಿ ಕೆರೆಗೆ ನೀರನ್ನು ತುಂಬಿಸಿದ್ದು ಆ ಮೂಲಕ ೯೨ ಎಕರೆ ಜಮೀನಿಗೆ ಪರೋಕ್ಷವಾಗಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಇ) ಆಗಸ್ಟ್ ೨೦೦೫ ಹಾಗೂ ಜುಲೈ, ಆಗಸ್ಟ್ ೨೦೦೬ರಲ್ಲಿ ಆದ ಅತಿವೃಷ್ಟಿಯಿಂದ ಕೃಷ್ಣಾ ನದಿಯಲ್ಲಿ ಪ್ರವಾಹದಿಂದ ಈ ಯೋಜನೆಯು ನೀರಿನಲ್ಲಿ ಮುಳುಗಿದ್ದರಿಂದ. ಯೋಜನೆಯು ಸ್ಥಗಿತಗೊಂಡಿತ್ತು. ಯೋಜನೆಯನ್ನು ಪುನರಾರಂಭ ಮಾಡಲು ೧೦.೮೦ ಲಕ್ಷ ರೂ. ಗಳ ಅನುದಾನದಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ನೀರಿನಲ್ಲಿ ಮುಳುಗಿ ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ಪುನರ್ ಸ್ಥಾಪಿಸಲು ಎಸ್ಕಾಂ ವತಿಯಿಂದ ವಿಳಂಬವಾಗಿತ್ತು. ಈ ಸಂದರ್ಭದಲ್ಲಿ ಮಳೆಗಾಲವು ಬೇಗನೆ ಪ್ರಾರಂಭಗೊಂಡ ಪ್ರಯುಕ್ತ ಪುನಃ ನದಿಗೆ ಬಂದ ಪ್ರವಾಹದಿಂದ ಯೋಜನೆಯ ಪಂಪಿಂಗ್ ಮೆಷಿನರಿ, ವಿದ್ಯುತ್ ಟಿ.ಸಿ. ಕೆಟ್ಟುಹೋಗಿವೆ. ಈ ಕಾರಣಗಳಿಂದಾಗಿ ಉದ್ದೇಶಿತ ಅಚ್ಚುಕಟ್ಟಿಗೆ ನೀರೊದಗಿಸಲು ಸಾಧ್ಯವಾಗಿಲ್ಲ. ಈ ಯೋಜನೆಯನ್ನು ೭.೦೦ ಲಕ್ಷ ರೂ.ಗಳ ಅನುದಾನದೊಂದಿಗೆ ದುರಸ್ತಿಪಡಿಸಲಾಗುತ್ತಿದ್ದು, ೨೦೦೭ರ ಏಪ್ರಿಲ್ ತಿಂಗಳಲ್ಲಿ ಪೂರ್ಣಗೊಳಿಸಲು ರೈತರ ಬೇಡಿಯನ್ವಯ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, ಉಪ ಮುಖ್ಯಮಂತ್ರಿಯವರಿಗೆ ಇಲಾಖೆಯವರು ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ, ನಾವು ಸದನದಲ್ಲಿ ಏನು ಪ್ರಶ್ನೆಯನ್ನು ಕೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ.

ಈ ಯೋಜನೆ ಇರುವುದು ದೂದಗಂಗಾ ನದಿಯ ಮೇಲೆ, ಆದರೆ ಇವರು ಉತ್ತರವನ್ನು ಕೊಡುತ್ತಾರೆ, ಕೃಷ್ಣನದಿಯ ಮೇಲೆ ಈ ಯೋಜನೆ ಇರುವುದರಿಂದ, ಮಹಾಪೂರದಲ್ಲಿ ಈ ಯೋಜನೆ ಮುಳುಗಿದೆ ಎಂದು ಉತ್ತರವನ್ನು ಕೊಟ್ಟರೆ ನಾವು ಪ್ರಶ್ನೆಯನ್ನು ಏನು ಕೇಳಬೇಕು ನೀವೇ ಹೇಳಿ. ಈ Lift irrigation scheme ಯಾವ ನದಿಯ ಮೇಲೆ ಎಂದು ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲವೆಂದರೆ ನಾವು ಏನು ಪ್ರಶ್ನೆಯನ್ನು ಕೇಳುವುದು ? ೨೦೦೫-೦೬ ನೇ ಸಾಲಿನಲ್ಲಿ ಮಹಾಪೂರದಿಂದ ಈ lift irrigation ನೀರಿನಲ್ಲಿ ಮುಳುಗಿದ್ದರಿಂದ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಈ ಯೋಜನೆ ದೂದಗಂಗಾ ನದಿಯ ಮೇಲೆ ಬರುತ್ತದೆ. ಮಹಾಪೂರದಲ್ಲಿ ಮುಳುಗಬಾರದೆಂದು ಇಟೆಂಕ್‌ನಲ್ಲಿ ಜಾಕ್‌ವೆಲ್‌ನಿಂದ ಕಟ್ಟಿರುತ್ತಾರೆ. ಈ ತರಹ ಉತ್ತರವನ್ನು ಕೊಟ್ಟರೆ ಏನು ಹೇಳುವುದು ಹೇಳಿ? ಇನ್ನೊಂದು ಉತ್ತರವನ್ನು ಕೊಟ್ಟಿದ್ದಾರೆ. ೯೨ ಎಕರೆಗೆ ಆಗುವಷ್ಟು ನಾವು ಕೆರೆಗೆ ನೀರನ್ನು ಬಿಟ್ಟಿದ್ದೇವೆಂದು ಹೇಳಿದ್ದಾರೆ. ಆ ಸ್ಕೀಮ್ ಇನ್ನು ಪ್ರಾರಂಭವಾಗಿರುವುದಿಲ್ಲ. ಅಲ್ಲಿ ಸಂಪೂರ್ಣವಾಗಿ ಪೈಪ್‌ಲೈನ್‌ಗಳು ಲೀಕೇಜ್ ಆಗಿವೆ. ಅಲ್ಲಿಂದ ಒಂದು ಹನಿ ನೀರು ಕೂಡ ಜಮೀನುಗಳಿಗೆ ಬರುವುದಿಲ್ಲ. ನಾವು ೯೨ ಎಕರೆಗೆ ನೀರಾವರಿಯನ್ನು ಮಾಡಿದ್ದೆವು, ಚಿಕ್ಕೋಡಿ ಟ್ರಾನ್ಸ್ ಕೆನಾಲ್‌ನಿಂದ ನಾವು ನೀರಾವರಿಯನ್ನು ಮಾಡಿದ್ದೆವು. ದಯವಿಟ್ಟು ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ ಹೇಗೆ ? ಅವರು ೩೦ ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ. ನಮಗೆ ಉತ್ತರವನ್ನು ಕೊಡಲಿಲ್ಲವೆಂದರೆ ಇನ್ನು ಬಹಳ ಒಳ್ಳೆಯದು ಆಗುತ್ತಿತ್ತು. ಈ ತರಹ ಅಧಿಕಾರಿಗಳು ಉಪ ಮುಖ್ಯಮಂತ್ರಿಗಳಿಗೆ ಉತ್ತರವನ್ನು ಕೊಟ್ಟರೆ ನಾವು ಏನು ಪ್ರಶ್ನೆಯನ್ನು ಕೇಳಬೇಕು, ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ರಾಮಚಂದ್ರಗೌಡ : ಇಲ್ಲಿ ಈ ಪ್ರಶ್ನೆ ಏನಾಗಿದೆ ಎಂದರೆ, ಸುಮಾರು ಈ ಅಚ್ಚುಕಟ್ಟಿನಲ್ಲಿ ೩೦೧ ಎಕರೆ ಜಮೀನಿಗೆ ನೀರು ಉಣಿಸುವ ಕಾರ್ಯಕ್ರಮ ಇದೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, ನಾವು ಈ ಉತ್ತರವನ್ನು ಸರಿಪಡಿಸಬೇಕು. ಎಷ್ಟು ಎಕರೆ ನೀರಾವರಿ ಇದೆ. ಆ ಸ್ಕೀಮ್ ನ್ನು ಮಾಡಿರುವುದು ನಾವೇ. ಎಷ್ಟು ಅಚ್ಚುಕಟ್ಟು ಪ್ರದೇಶವಾಗುತ್ತದೆ ಅದು ಎಲ್ಲಾ ನಮಗೆ ಗೊತ್ತಿದೆ. ಅದನ್ನು ನಾವು ಕೇಳುತ್ತಿಲ್ಲ. ಏತಕ್ಕಾಗಿ ಇದು ಪ್ರಾರಂಭವಾಗಿಲ್ಲವೆಂದರೆ ಕೃಷ್ಣನದಿಯೊಳಗಡೆ ಮುಳುಗಡೆಯಾಗಿದೆ ಎಂದು ಉತ್ತರವನ್ನು ಕೊಡುತ್ತಾರೆ. ಈ ತರಹದ ಉತ್ತರವನ್ನು ತೆಗೆದುಕೊಂಡರೆ ಏನು ಪ್ರಯೋಜನ.

ಶ್ರೀ ರಾಮಚಂದ್ರಗೌಡ : ಅಲ್ಲಿ ವಾಸ್ತವಿಕವಾಗಿ ಏನು ಆಗಿದೆ ಎಂಬುದರ ಬಗ್ಗೆ ನಾನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ತಾವು ಪ್ರಶ್ನೆಯನ್ನು ಕೇಳಿರುವುದರಿಂದ ಬಹಳ ಒಳ್ಳೆಯದಾಗಿದೆ. ಏಕೆಂದರೆ, ಈ ಏತ ನೀರಾವರಿಯಲ್ಲಿ, ಯಾರು ರೈತರು ನಮಗೆ ನೀರು ಬೇಕೆಂದು ಬೇಡಿಕೆಯನ್ನು ಇಡದೆ ಇದ್ದುದರಿಂದ ಇವರು ಯಾವುದೇ ಗಮನವನ್ನು ಹರಿಸಲಿಲ್ಲ. ಆದಾಗ್ಯೂ ಕೂಡ ಅಲ್ಲಿರತಕ್ಕಂತಹ ಕೆರೆಗೆ ಯಾರು ರೈತರು ಬೇಡಿಕೆಯನ್ನು ಇಡದ ಮೇಲೆ ಕೆರೆಗಾದರೂ ನೀರನ್ನು ಬಿಡೋಣವೆಂದು ಕೆರೆಗೆ ನೀರನ್ನು ಬಿಟ್ಟರು. ಕೆರೆಗೆ ನೀರನ್ನು ಬಿಟ್ಟಿದ್ದರಿಂದ ಪರೋಕ್ಷವಾಗಿ ೯೨ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿಯಾಗಿದೆ. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ, ಇಲ್ಲಿ ಟ್ರಾನ್ಸ್ ಫಾರ್ಮರ್, ಮೋಟಾರುಗಳನ್ನು ಇಟ್ಟರೆ ಆ ಅಣೆಕಟ್ಟು ತುಂಬಿದಾಗ ಮುಳುಗಿಹೋಗುವಂತಹ ಪರಿಸ್ಥಿತಿ ಹಿಂದೆ ಆಗಿದೆ. ನಾನು ಇವತ್ತು ಅವರಿಗೆ ಹೇಳಿದೆ. ಈ ರೀತಿಯಾಗಿ ಅಣೆಕಟ್ಟಿನ ನೀರಿನ ಮಟ್ಟ ಬಂದಾಗ ನೀವು ಪಂಪು ಮತ್ತು ಟ್ರಾನ್ಸ್‌ಫಾರ್ಮರ್ ಲೋಯರ್ ಲೆವೆಲ್ ಗೆ ಬಿಟ್ಟಾಗ ಅದು ಮುಳುಗದೆ ಏನಾಗುತ್ತದೆಂದು ಕೇಳಿದೆ. ನಾನು ಅವರಿಗೆ ನೀವು ಕೇಳುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ನಾನು ಅವರಿಗೆ ಹೇಳಿದ್ದೇನೆ. ಆ ನೀರು highest ಮಟ್ಟ ಎಷ್ಟು ಬರುತ್ತದೆ ಅದಕ್ಕಿಂತ ಎತ್ತರದ ಮಟ್ಟದಲ್ಲಿ ಟ್ರಾನ್ಸ್ ಫಾರ್ಮರ್ ನ್ನು ಇಟ್ಟು ಹೊಸದಾಗಿ ಡಿಸೈನ್ ಮಾಡಿ ಅದಕ್ಕೆ ಮೋಟಾರ್ ವ್ಯವಸ್ಥೆ ಮಾಡುವಂತಹ direction ನ್ನು ಅವರಿಗೆ ಕೊಟ್ಟಿದ್ದೇನೆ. ಸನ್ಮಾನ್ಯ ಉಪಮುಖ್ಯಮಂತ್ರಿಗಳು ಬಂದಾಗ ನಾನು ಏನು ಉತ್ತರವನ್ನು ಕೊಟ್ಟಿದ್ದೇನೆ ಎನ್ನುವಂತಹ ಅಂಶವನ್ನು ನಾನು ಅವರ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಅದಕ್ಕೆ ಬೇಕಾಗುವಷ್ಟು ಹಣವನ್ನು ಬಿಡುಗಡೆ ಮಾಡಿಸಿ ಕೂಡಲೇ ಆ ಕೆಲಸವನ್ನು ಮಾಡುವಂಥ ಕೆಲಸವನ್ನು ನಾನು ಮಾಡುತ್ತೇನೆ. ಎನ್ನುವಂತಹ ಭರವಸೆಯನ್ನು ನಾನು ನಿಮಗೆ ಕೊಡುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಈಗ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ೯೨ ಎಕರೆಯಲ್ಲ ೧ ಎಕರೆಗೂ ನೀರಾವರಿಯಾಗಿರುವುದಿಲ್ಲ. ಆ ಪಂಪುಸೆಟ್ಟು ಪ್ರಾರಂಭವಾಗಿಲ್ಲವೆಂದ ಮೇಲೆ ಅಲ್ಲಿ ನೀರಾವರಿ ಎಲ್ಲಿ ಆಗುತ್ತದೆ? ಬೇಕಾದರೆ ಮಾನ್ಯ ಸಚಿವರಾದ ರಾಮಚಂದ್ರೇಗೌಡರೇ ನಮ್ಮ ಕ್ಷೇತ್ರಕ್ಕೆ ಬರಲಿ. ನಾನು ಅವರನ್ನು ಬೇಕಾದರೆ ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿರುವಂತಹ ಸ್ಕೀಮ್ ನ್ನು ತೋರಿಸುತ್ತೇನೆ. ಈ ಸ್ಕೀಮ್‌ನ್ನು ನಿಂದಾಗಿ ಅಲ್ಲಿ ೯೨ ಎಕರೆಗೆ

ನೀರಾವರಿಯಾಗಿದೆ ಎಂದು ತೋರಿಸಿದರೆ, ತಾವು ಏನು ಶಿಕ್ಷೆಯನ್ನು ಕೊಡುತ್ತೀರೋ ಅದನ್ನು ಅನುಭವಿಸಲು ನಾನು ಸಿದ್ದನಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಮಾನ್ಯ ಯಡಿಯೂರಪ್ಪನವರ ಪರವಾಗಿ ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಆ ಕೆರೆಗೆ ನೀರನ್ನು ಬಿಟ್ಟಿದ್ದು ಬೇರೆ ಸ್ಕೀಮ್ ನಿಂದ. ಚಿಕ್ಕೋಡಿ ಗ್ರಾಂಟ್ ಕೆನಾಲ್ ನಿಂದ ಆ ಕೆರೆಗೆ ನೀರನ್ನು ತುಂಬಿಸಿದ್ದಾರೆಯೇ ಹೊರತಾಗಿ ಈ ಸ್ಕೀಮ್‌ನಿಂದ ನಾವು ನೀರನ್ನು ತುಂಬಿಸಿರುವುದಿಲ್ಲ. ಈ ಸ್ಕೀಮ್‌ನ್ನು ಮಾಡುವಾಗ ಒಂದು ಬೇಡಿಕೆಯನ್ನು ಇಟ್ಟಾಗ lift irrigation scheme ನ್ನು ಮಾಡುತ್ತಾರೋ, ಅಥವಾ ಬೇಡಿಕೆಯಿಲ್ಲದೆ lift irrigation scheme ನ್ನು ಮಾಡುತ್ತಾರೋ ಅದರ ಬಗ್ಗೆ ನೀವೇ ಹೇಳಬೇಕು.

ಅಧ್ಯಕ್ಷರು ಮಾನ್ಯ ಹುಕ್ಕೇರಿಯವರೇ ಈಗ concerned Minister ಇಲ್ಲ. ತಾವು concerned Minister ರವರ ಹತ್ತಿರ ಮಾತನಾಡಿ. ಇವೆಲ್ಲವನ್ನು ಮಾನ್ಯ ಉಪಮುಖ್ಯಮಂತ್ರಿಯವರಾದ ಯಡಿಯೂರಪ್ಪನವರನ್ನು ಕರೆದುಕೊಂಡು ಹೋಗಿ ತೋರಿಸಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ದಯವಿಟ್ಟು ಅದನ್ನು ಬೇಗನೆ ಪ್ರಾರಂಭ ಮಾಡಿಸಬೇಕು. ಅದನ್ನು ಬೇಗನೆ ಪ್ರಾರಂಭ ಮಾಡಿಸಿದರೆ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ರಾಮಚಂದ್ರೌಡ : ಅಲ್ಲಿ ವಿಶೇಷವಾದ ಡಿಸೈನ್ ಮಾಡಿಸಿ ಎತ್ತರ ಮಟ್ಟದಲ್ಲಿ ಮಾಡಬೇಕೆಂದು ನಾನು ಈಗಾಗಲೆ ಅವರಿಗೆ ಹೇಳಿದ್ದೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಈಗಾಗಲೇ ಈ ಜಾಕ್ ವೆಲ್ ಎತ್ತರದ ಮಟ್ಟದಲ್ಲಿ ಇದೆ.

ಶ್ರೀ ರಾಮಚಂದ್ರೇಗೌಡ : ಮಳೆ ಬಂದಾಗ transformer ಗಳು ಕೂಡ ಮುಳುಗಿ ಹೋಗಿದೆ. ಪಂಪು ಸಹ ಮುಳುಗಿಹೋಗಿದೆ ಎನ್ನುವಂತಹ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ. ಹಾಗಾಗಿ ನಾನು ಹೇಳುತ್ತಿರುವುದು. ಹೊಸದಾಗಿ ಸರಿಯಾಗಿ ಡಿಸೈನ್ ಮಾಡಿ ಎತ್ತರದ ಮಟ್ಟದಲ್ಲಿ ಅದನ್ನು ಪ್ರತಿಷ್ಟಾಪನೆ ಮಾಡಬೇಕೆಂಬ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ.